# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **847** |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

******

| ಪ್ರಶ್ನೆ | | ಉತ್ತರ |
|---|---|---|
| ಅ) | ESCOM ಮತ್ತು KPCL ಸಂಸ್ಥೆಗಳು ಅನುಭವಿಸಿದಾಗ ಸಂಭಾವ್ಯ ದಿವಾಳಿಯಾದಾಗ ಸರ್ಕಾರದ ಮೇಲೆ ಹೊಣೆಗಾರಿಕೆ ಉಂಟಾಗುವ ಸಾಧ್ಯತೆಯ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ; | ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತವೆ. ಈ ಸರಬರಾಜು ಕಂಪನಿಗಳು ಪ್ರತಿ ವರ್ಷವು ನಿಗದಿತ ಸಮಯದಲ್ಲಿ ದರ ಪರಿಷ್ಕರಣೆಯನ್ನು ಕರ್ನಾಟಕ ವಿದ್ಯುತ್ ಶ್ಚಕ್ತಿ ನಿಯಂತ್ರಣಾ ಆಯೋಗದಿಂದ ಪಡೆದು ವಹಿವಾಟು ನಡೆಸುತ್ತಿರುವುದರಿಂದ ಸಂಬಾವ್ಯ ನಷ್ಟಅಥವಾ ದಿವಾಳಿ ಆಗುವ ಸಂಭವವಿರುವುದಿಲ್ಲ. ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ರಾಷ್ಟ್ರ ಮಟ್ಟದಲ್ಲಿ ಉತ್ತಮ ಮಟ್ಟದ ಕಂಪನಿಗಳೆಂದು ಸೂಚ್ಯಂಕವನ್ನು ಪಡೆದಿರುತ್ತವೆ.<br><br>ರಾಜ್ಯ ಸರ್ಕಾರವು ರೈತರ ನೀರಾವರಿ ಪಂಪ್ ಸೆಟ್ ಗಳ ಬಳಕೆಯ ಬಾಪ್ತು ಮತ್ತು ಗೃಹಜ್ಯೋತಿ ಸ್ಥಾವರಗಳ ಸಹಾಯಧನವನ್ನು ಮಾಹೆಯಾನ ಬಿಡುಗಡೆಗೊಳಿಸುತ್ತಿರುವುದ ರಿಂದ ವಿಸಕಂಗಳಿಗೆ ಆರ್ಥಿಕವಾಗಿ ನಗದು ಒಳಹರಿವಿಗೆ ಕೊರತೆ ಇರುವುದಿಲ್ಲ. ಇದಲ್ಲದೇ, ಗ್ರಾಮ ಪಂಚಾಯತಿಗಳ ವಿದ್ಯುತ್ ಬಾಕಿ ಮೊತ್ತವನ್ನು ಕಾಲ ಕಾಲಕ್ಕೆ ಸರ್ಕಾರಿ ಖಾತರೀಕರಣ ಮೂಲಕ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಲಾಗುತ್ತಿದೆ. ವಿದ್ಯುತ್ ಖರೀದಿ ಬಾಕಿ ಮೊತ್ತಕ್ಕೆ ವಿಸಕಂಗಳು ಸಾಲ ಪಡೆಯಲು ಸರ್ಕಾರದ ಖಾತರಿ ನೀಡಲಾಗಿದೆ.<br><br>ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಣಕಾಸಿನ ನೆರವು ಅಗತ್ಯವಿದ್ದಲ್ಲಿ, ಕಂಪನಿಗಳು ಹಣಕಾಸಿನ ಸ್ಥಿತಿಗತಿ, ಅನುದಾನ, ಲಾಭ-ನಷ್ಟ, ಸಹಾಯಧನ ಬೇಡಿಕೆ ಮತ್ತು ಬಿಡುಗಡೆ, ಕಂದಾಯ ಬೇಡಿಕೆ ಮತ್ತು ವಸೂಲಾತಿ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿ ವಿವಿಧ ಬ್ಯಾಂಕ್ /ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವ ಸಂಬಂಧ ಸರ್ಕಾರದ ಖಾತರಿ ಒದಗಿಸುವಂತೆ ಸರ್ಕಾರವನ್ನು ಕೋರುತ್ತಿದ್ದು, ಈ ಸಂಬಂಧ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿ ಕ್ರಮ ವಹಿಸುತ್ತಿದೆ. ಆದ್ದರಿಂದ ವಿಸಕಂಗಳು ಮತ್ತು ಕೆಪಿಸಿಎಲ್ ಸಂಸ್ಥೆಗಳು ದಿವಾಳಿಯಾಗುವ ಪರಿಸ್ಥಿತಿ ಉದ್ಭವವಾಗುವುದಿಲ್ಲ. |

| | | |
|---|---|---|
| ಆ) | ಈ ಬಗ್ಗೆ ಮುಂಜಾಗ್ರತಾ ಕ್ರಮಗಳ ಶಿಫಾರಸ್ಸಿಗಾಗಿ ತಜ್ಞರ ಸಮಿತಿ ರಚಿಸಲಾಗಿದೆಯೇ; (ವಿವರ ಒದಗಿಸುವುದು) | ಪ್ರಸ್ತುತ ವಿಸಕಂಗಳು ಮತ್ತು ಕೆಪಿಸಿಎಲ್ ಸಂಸ್ಥೆಗಳು ದಿವಾಳಿಯಾಗುವ ಸನ್ನಿವೇಶ ಕಂಡುಬರದಿರುವುದರಿಂದ ಪ್ರತ್ಯೇಕವಾಗಿ ತಜ್ಞರ ಸಮಿತಿ ರಚಿಸಿರುವುದಿಲ್ಲ. |
| ಇ) | ತಜ್ಞರ ಸಮಿತಿಯನ್ನು ಯಾವ ದಿನಾಂಕದಂದು ರಚಿಸಲಾಗಿದೆ; ಇಲ್ಲಿಯವರೆಗೆ ಎಷ್ಟು ಸಭೆ ನಡೆಸಿದೆ; (ನಡಾವಳಿಯ ಪ್ರತಿ ಒದಗಿಸುವುದು) | |
| ಈ) | ಯಾವ ಶಿಫಾರಸ್ಸನ್ನು ಸಮಿತಿಯು ನೀಡಿದೆ? (ವಿವರ ಒದಗಿಸುವುದು) | |

ಸಂಖ್ಯೆ: ಎನರ್ಜಿ 347 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು